# ಓಡಿಂಗ್ ಹವ್ಯಾಸದ ಸುತ್ತ..



ಪ್ರಕೃತಿಯ ವಿಸ್ಮಯ ಜೀವಿಯಾಗಿರುವ ಏರೋಪ್ಲೇನ್ ಮತ್ತು ಹೆಲಿಕಾಪ್ಟರ್ ಚಿಟ್ಟೆಗಳು ಹೆಚ್ಚೆಂದರೆ ಮೂರು ತಿಂಗಳವರೆಗೆ ಮಾತ್ರ ಜೀವಿಸುತ್ತವೆ! ದಿನವೊಂದಕ್ಕೆ 600 ಸೊಳ್ಳೆಗಳ ಲಾರ್ವಾ ಮತ್ತು ಕೀಟಗಳ ಭಕ್ಷಣೆ ಮಾಡುವ ಇವುಗಳ ಅತ್ಯುತ್ತಮ ಆಹಾರವೆಂದರೆ ಸೊಳ್ಳೆಗಳೇ.

■ ಚಿತ್ರ-ಲೇಖನ:

**ಪುಟ್ಟರಾಜು ಕೈಗಾ**



ಪಕ್ಷಿ ವೀಕ್ಷಣೆಯಂತೆ, ಜಗತ್ತಿನಾದ್ಯಂತ ಹೊಸದಾಗಿ ಕ್ಷಿಪ್ರವಾಗಿ ಹಬ್ಬುತ್ತಿರುವ ಹವ್ಯಾಸವೆಂದರೆ ಓಡಿಂಗ್. ಏನಿದು ಓಡಿಂಗ್.. ಎನ್ನುವ ಪ್ರಶ್ನೆ ಸಹಜ. ಬಾಲ್ಯದ ದಿನಗಳಲ್ಲಿ ಓಡುತ್ತಾ ಏರೋಪ್ಲೇನ್ ಮತ್ತು ಹೆಲಿಕಾಪ್ಟರ್ ಚಿಟ್ಟೆಯನ್ನು ಅಟ್ಟಾಡಿಸಿ, ಹಿಡಿದು ಅದರ ದೇಹದ ಹಿಂಭಾಗಕ್ಕೆ ದಾರವನ್ನು ಕಟ್ಟಿ ಹಾರಲು ಬಿಟ್ಟು ಆನಂದಿಸುತ್ತಿದ್ದುದು ನೆನಪಿದೆಯೆ? ಇದರದ್ದೇ ಸುಧಾರಿತ ರೂಪವಾದ ಚಿಟ್ಟೆಗಳ ಅಧ್ಯಯನ, ವೀಕ್ಷಣೆಗೆ ಓಡಿಂಗ್ ಎನ್ನುತ್ತಾರೆ. ಬಾಲ್ಯದಲ್ಲಿ ಓಡಿ ಹಿಡಿಯುತ್ತಿದ್ದರೆ, ಈಗ ನಿಂತು, ನೋಡಿ ಆನಂದಿಸಿ ಹಿಡಿಯದೆ ಬರೇ ಛಾಯಾಚಿತ್ರದಲ್ಲಿ ಸೆರೆ ಹಿಡಿದು ವೀಕ್ಷಣೆ ಮಾಡುವ ಕಲೆಯೇ ಓಡಿಂಗ್.

ಏರೋಪ್ಲೇನ್ ಚಿಟ್ಟೆ ಮತ್ತು ಹೆಲಿಕಾಪ್ಟರ್ ಚಿಟ್ಟೆಗಳ ಅಧ್ಯಯನ ವೀಕ್ಷಣೆಗೆ ಓಡಿಂಗ್ ಎಂಬ ಹೆಸರು ಯಾಕಿಟ್ಟರು ಎನ್ನುವುದೂ ಕುತೂಹಲದ ಪ್ರಶ್ನೆ. ಜೀವಸಂಕುಲದಲ್ಲಿ ಮಿಲಿಯ ಗಟ್ಟಲೆ ಜಾತಿ, ಪ್ರಬೇಧಗಳಿವೆ. ಈ ಕೀಟಗಳನ್ನೆಲ್ಲಾ ಸೇರಿಸಿ ಒಂದು ಕುಲವಾಗಿ ವರ್ಗೀಕರಿಸಿ ಅದಕ್ಕೆ

(30ನೇ ಪುಟ ನೋಡಿ)

